ರೂಮಿಗೆ ಹೋಗಿ ಜಗಳ ಮಾಡಿದ. ಅವನೊಬ್ಬ ಸಾದಾ ಗೂಂಡಾ. ಆದರೆ ಮಾನ್‌ಬಹಾದ್ದೂರ್ ಸಿಂಗ್ ಅವರ ಕೊರಳ ಪಟ್ಟಿ ಹಿಡಿದುಕೊಂಡು ಹೊಡೆಯುತ್ತ ಕಾಲೇಜಿನ ಅಂಗಳಕ್ಕೆ ಎಳೆದುಕೊಂಡು ಬಂದ. ಸಾವಿರಾರು ವಿದ್ಯಾರ್ಥಿಗಳು, ಅನೇಕ ಅಧ್ಯಾಪಕರು ಜಮಾವಣೆಗೊಂಡರು. ಸುತ್ತ ನಿಂತು ನೋಡುತ್ತಿದ್ದರು. ಯಾರೂ ಅದನ್ನು ತಡೆಯುವ ಧೈರ್ಯ ಮಾಡಲಿಲ್ಲ. ಅವರನ್ನು ಒಂದು ಡ್ರಮ್ಮಿನ ಕಡೆ ಆ ಗೂಂಡಾ ಕರೆದುಕೊಂಡು ಬಂದ. ಅದರಲ್ಲಿ ನೀರು ತುಂಬಿತ್ತು. ಅವರ ಕೂದಲನ್ನು ಹಿಡಿದು ತಲೆಯನ್ನು ನೀರಿನಲ್ಲಿ ಹಲವು ಸಲ ಮುಳುಗಿಸಿ ಚಾಕುವಿನಿಂಕ ಹತ್ಯೆ ಮಾಡಿದ. ಎಲ್ಲರೂ ಮೂಕರಾಗಿ ನಿಂತಿದ್ದರು. ಅಲ್ಲಿದ್ದವರು ಸಿಟ್ಟಿನಿಂದ ಉಗಿದಿದ್ದರೂ ಆ ಉಗುಳಿನಲ್ಲಿ ಆತ ಮುಳುಗಿ ಹೋಗುತ್ತಿದ್ದ. ಯಾರೂ ಹಾಗೆ ಮಾಡುವ ಧೈರ್ಯ ತೋರಲಿಲ್ಲ. ಅಮಾಯಕನೊಬ್ಬನ ಹತ್ಯೆಯಾಯಿತು. ಯೋಚಿಸಿ, ಒಂದು ವೇಳೆ ಈ ಸ್ಥಿತಿ ಒಂದು ದೇಶದ್ದಾದರೆ, ಅಥವಾ ಜಗತ್ತಿನದಾದರೆ ಪರಿಸ್ಥಿತಿ ಏನು ಅಂತ? ಈಗಲೂ ಅನೇಕ ದೇಶಗಳು ಹೀಗೆಯೆ ಪರಸ್ಪರ ಕಾದಾಡುತ್ತಿವೆ. ಅನೇಕ ಅಮಾಯಕರು ತೀರಿಕೊಳ್ಳುತ್ತಿದ್ದಾರೆ. ವಿಶ್ವಸಂಸ್ಥೆಗಾಗಲಿ, ಯಾವುದೇ ಅಂತರರಾಷ್ಟ್ರೀಯ ಸಂಸ್ಥೆಗಾಗಲಿ ಏನೂ ಮಾಡಲಾಗುತ್ತಿಲ್ಲ. ಸುಮ್ಮನೆ ಸುದ್ದಿ ಓದುತ್ತಾ, ನೋಡುತ್ತಾ ಕುಳಿತುಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ. ಅಮಾಯಕರನ್ನು ಹಿಂಸಿಸುವ, ಕೊಲೆ ಮಾಡುವ ಜಗತ್ತು ಉದ್ಧಾರವಾಗುವುದೇ? ಏನೆಲ್ಲ ವಿಚಾರಗಳು ತಲೆಯಲ್ಲಿ ಬಂದು ಈ ಕವಿತೆ ಬರೆದೆ. ನನ್ನ ಅಸಹಾಯಕತೆ ಮತ್ತು ಗಿಲ್ಟ್‌ನಲ್ಲಿ ಈ ಕವಿತೆ ಹುಟ್ಟಿತು.

**◆ ನೀವು ಕವಿತೆ ಬರೆಯಲು ಆರಂಭಿಸಿದಾಗ ಕವಿತೆಯ ಕುರಿತು ನಿಮ್ಮ ಮನಸ್ಸಿನೊಳಗಿದ್ದ ಕಲ್ಪನೆಗಳೇನು? ಕವಿತೆ ಅಂದರೆ ನಿಮಗೆ ಏನಾಗಿ ಒದಗಿ ಬಂದಿತ್ತು? ಇಂಥ ಒಂದು ಕಾವ್ಯ ಜಗತ್ತಿನ ಭಾಗವಾಗಬೇಕು ಅಂತ ಯಾಕನ್ನಿಸಿತು?**

ಹದಿಮೂರು ಹದಿನಾಲ್ಕು ವಯಸ್ಸು ಇರಬಹುದೇನೊ. ಕವಿತೆಯ ಕಡೆಗೆ ಆಕರ್ಷಣೆ ಉಂಟಾಗಿತ್ತು. ಬರೆಯಲು ಆಗತಾನೇ ಶುರುಮಾಡಿದ್ದೆ. ಸಣ್ಣ ಮಗು ನಡೆಯಲು ಶುರು ಮಾಡಿದಾಗ ವಾಲಾಡುತ್ತದಲ್ಲ, ಹಾಗಿತ್ತು ಮೊದಲಿನ ಕಾವ್ಯಪ್ರಯತ್ನ. ಇದನ್ನು ಡೇಗಾಡೇಗಿ ಅಂತಾರೆ ಹಿಂದಿಯಲ್ಲಿ. ಏನೇನೊ ಅನುಕರಣೆ ಮಾಡಲು ಶುರು ಮಾಡುತ್ತೇವೆ. ಬಾಲ್ಯದಿಂದಲೇ ಕಾವ್ಯ ನನ್ನ ಜೊತೆ ಬರುತ್ತಿತ್ತು ಅನಿಸುತ್ತದೆ. ಜೋಗುಳ ಹಾಡುಗಳು, ಹಳ್ಳಿಯಲ್ಲಿನ ಜನಪದ ಹಾಡುಗಳು ಇತ್ಯಾದಿ. ಆಮೇಲೆ ಪಠ್ಯಕ್ರಮದಲ್ಲಿದ್ದ ಕವಿತೆಗಳು. ಸೂರದಾಸ್, ತುಳಸಿದಾಸ್, ಕಬೀರ್, ಮೀರಾ ಇತ್ಯಾದಿ. ಕಬೀರರ ಒಂದು ದೋಹೆ ತುಂಬಾ ನಗು ತರಿಸುತ್ತಿತ್ತು – 'ಮನ್ ನ ರಂಗಾಯೇ ರಂಗಾಯೇ ಜೋ ಕಪಡಾ, ದಾಡಿ ಬಢಾಯೆ ಬನ್ ಗಯೇ ಬಕರಾ'. ತುಂಬಾ ಮಜಾ ಎನಿಸುತ್ತಿತ್ತು. ಜೊತೆಗೆ ಒಂದು ಪರಿಣಾಮ ಕೂಡ ಮನಸ್ಸಿನ ಮೇಲೆ ಉಂಟಾಗುತ್ತಿತ್ತು. ಮುಂದೆ ಬರುಬರುತ್ತಾ ಮೈಥಿಲಿಶರಣ್ ಗುಪ್ತ್, ದಿನಕರ್, ನಿರಾಲಾ ಇವರೆಲ್ಲ ಕೂಡ ಇಷ್ಟವಾಗತೊಡಗಿದರು. ನಾನು ಕೂಡ ಏನೋ ಒಂದನ್ನು ಅಭಿವ್ಯಕ್ತಿಸಬಹುದು ಎನಿಸಿತ್ತು. ಮೊದಲು ಪ್ರಕೃತಿ ಕುರಿತು ಬರೆದೆ. ತಾರುಣ್ಯದಲ್ಲಿ ಪ್ರೇಮ ಕವಿತೆಗಳನ್ನು ಬರೆದೆ. ದೀಪದಿಂದ ದೀಪ ಹೊತ್ತಿಕೊಳ್ಳುವಂತೆ, ಕವಿತೆಯಿಂದ ಕವಿತೆ ಹೊತ್ತಿಕೊಂಡಿತು.

ಕವಿತೆ ಯಾವಾಗಲೂ ಒಂದು ಕರೆ (ಪುಕಾರ್). ಅಂತರಂಗದ ಬಹಿರಂಗದ ಕರೆ. ಕಬೀರ್ ಅನೇಕ ಸಲ 'ಕಹತ ಕಬೀರ್ ಸುನೋ ಭೈ ಸಾಧು' ಅಂತಲೇ ತಮ್ಮ ದೋಹೆಗಳನ್ನು ಮುಗಿಸುತ್ತಾರೆ. ಮೀರಾ, ಸೂರ್‌ದಾಸ್, ತುಳಸಿದಾಸ್, ನಿರಾಲಾ, ಮುಕ್ತಿಬೋಧ್, ಬಾಬಾ ನಾಗಾರ್ಜುನ್, ಮಹಾದೇವಿ ವರ್ಮಾ ಅವರಲ್ಲೂ ಒಂದೊಂದು ರೀತಿಯ ಕರೆ ಇದೆ. ಪ್ರತಿಯೊಂದು ಕವಿತೆ ಕೂಡ ಆರ್ತನಾದ. ಒಳಗಿನ ದುಃಖ. ಅದು ಎಲ್ಲರ ದುಃಖ ಕೂಡ. ಮನುಷ್ಯನೊಳಗಿನ ಆಳವಾದ ದುಃಖಗಳು ಕಾವ್ಯದಲ್ಲಿ ಪ್ರಕಟಗೊಂಡಾಗ ಅವು ಎಲ್ಲರ ದುಃಖಗಳಾಗಿ ಕಾಣುತ್ತವೆ. ವಾಲ್ಮೀಕಿ ರಾಮಾಯಣದ ಕ್ರೌಂಚ ಪಕ್ಷಿಯ ದುಃಖ ಕೇವಲ ಆ ಪಕ್ಷಿಯದು ಮಾತ್ರವಲ್ಲ. ಮನುಷ್ಯರೂ ಸೇರಿದಂತೆ ಸಮಸ್ತ ಸೃಷ್ಟಿಯ ದುಃಖವದು. ಸಾವಿರಾರು ವರ್ಷದಿಂದ ಅದರ ಆರ್ತನಾದ ಈ ಬ್ರಹ್ಮಾಂಡದಲ್ಲಿ ಮೊಳಗುತ್ತಿದೆ. ಒಮ್ಮೊಮ್ಮೆ ಕವಿಯ ನಿಜವಾದ ಕರೆ, ಕೂಗು ಕಳೆದುಹೋಗುತ್ತದೆ. ಇದು ನನಗೆ ಅತ್ಯಂತ ದುಃಖದ ವಿಷಯ. ನಮ್ಮ ನಿಜವಾದ